ಶ್ರೀ ಮಲ್ಲಾರಗೌಡ ಪಾಟೀಲ್.—ಮುಖ್ಯಮಂತ್ರಿಗಳು ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಸಂಕೇಶ್ವರ ಗಡಿ ಪ್ರದೇಶದಲ್ಲಿ ಇರುವಂಥ ಸ್ಥಳ. ಅಲ್ಲಿ ವೆಟರ್ನರಿ ಕಾಲೇಜು ಪ್ರಾರಂಭ ಮಾಡಿದರೆ ಹಣ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಆಶ್ವಾಸನೆ ಕೊಟ್ಟಮೇಲೆ ಪರಿಶೀಲನೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದ್ದರಿಂದ ಆಶ್ವಾಸನೆಯನ್ನು ಪೂರ್ತಿ ಮಾಡುವುದಕ್ಕೆ ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ. ಎಲ್. ಗೌಡ.—ಎಗ್ಸಾಮಿನ್ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಮಂಜೂರು ಮಾಡುತ್ತೇವೆ ಎಂದು ಕೊಟ್ಟಿಲ್ಲ.

ಶ್ರೀ ಬಾಪೂಗೌಡ ದರ್ಶನಾಪುರ.—ವೆಟರ್ನರಿ ಕಾಲೇಜುಗಳು ರಾಜ್ಯದಲ್ಲಿ ಬೇಕು ಎಂಬ ಬೇಡಿಕೆ ಇದೆ. ಎಷ್ಟೋ ದವಾಖಾನೆಗಳಲ್ಲಿ ಡಾಕ್ಟರುಗಳಿಲ್ಲದಿರುವುದರಿಂದ ಹೊಸದಾಗಿ ಈ ವರ್ಷದಲ್ಲಿ ವೆಟರ್ನರಿ ಕಾಲೇಜು ತೆರೆಯಬೇಕು ಎಂದು ಆ ಬಗ್ಗೆ ಒಂದು ಕಮಿಟಿಯನ್ನು ಮಾಡಿದ್ದರು. ಆ ಕಮಿಟಿ ವರದಿ ಏನಾದರೂ ಬಂದಿದೆಯೇ ? ಬಂದಿದ್ದರೆ ಕಮಿಟಿಯವರು ಯಾವ ಹಣದಲ್ಲಿ ಕಾಲೇಜು ಮಾಡಬೇಕೆಂಬ ಅಭಿಪ್ರಾಯ ಕೊಟ್ಟಿದ್ದಾರೆ ?

ಶ್ರೀ ಬಿ. ಎಲ್. ಗೌಡ.—ಪಶುವೈದ್ಯ ಕಾಲೇಜು ರಾಜ್ಯಕ್ಕೆ ಬೇಕು ಎಂದು ತೀರ್ಮಾನ ಮಾಡಿದ್ದಾರೆ. ಆದರೆ ಯಾವ ಸ್ಥಳದಲ್ಲಿ ಪ್ರಾರಂಭ ಮಾಡಬೇಕು ಎಂಬುದನ್ನು ತೀರ್ಮಾನ ಮಾಡಿಲ್ಲ. ಕಮಿಟಿ ವರದಿ ಬಂದಿಲ್ಲ. ಇನ್ನೊಂದು ವಾರದಲ್ಲಿ ವರದಿ ಬರಬಹುದೆಂಬ ನಿರೀಕ್ಷೆ ಇದೆ.

ಒಬ್ಬ ಮಾನ್ಯ ಸದಸ್ಯರು.—ಪಶುವೈದ್ಯರು ರಾಜ್ಯದಲ್ಲಿ ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಕಾಲೇಜು ಪ್ರಾರಂಭ ಮಾಡಿದರೆ ಅಲ್ಲಿ ಶಿಕ್ಷಣ ಪಡೆದು ವೈದ್ಯರಾಗಿ ಬರಬೇಕಾದರೆ ತಡವಾಗುತ್ತದೆ. ಆದ್ದರಿಂದ ಡಿಪ್ಲೊಮಾ ಕೋರ್ಸ್ ಪ್ರಾರಂಭ ಮಾಡಿ ವೈದ್ಯರನ್ನು ತಯಾರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಮಲ್ಲಾರಗೌಡ ಪಾಟೀಲ್.—ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿರುವುದು ಪತ್ರಿಕೆಯಲ್ಲಿ ಬಂದಿದೆ. ಸಂಕೇಶ್ವರಕ್ಕೆ ಪಶುವೈದ್ಯ ಶಾಲೆ ಕೊಡುತ್ತೇವೆಂದು ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ.

ಅಧ್ಯಕ್ಷರು.—ಅದು ನಮ್ಮ ರೆಕಾರ್ಡ್‌ನಲ್ಲಿಲ್ಲ ಎಂದು ಮಂತ್ರಿಗಳು ಹೇಳುತ್ತಿದ್ದಾರೆ.

ಶ್ರೀ ಮಲ್ಲಾರಗೌಡ ಪಾಟೀಲ್.—ತಮ್ಮ ರೆಕಾರ್ಡ್‌ನಲ್ಲಿ ಈಗ ಹೋಗುತ್ತದೆ. ಆದರೆ ಅವರ ರೆಕಾರ್ಡ್‌ನಲ್ಲಿ ಏನಿದೆ ಅದು ನಮಗೆ ಬೇಕಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ಬೆಂಗಳೂರಿನಲ್ಲಿರತಕ್ಕ ಪಶುವೈದ್ಯ ಕಾಲೇಜಿಗೆ ವ್ಯವಸಿತವಾದ ಆಸ್ಪತ್ರೆ ಇಲ್ಲದೇ ಇರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಿಂದೆ ಅದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಸರ್ಕಾರ ತೀರ್ಮಾನ ತೆಗೆದುಕೊಂಡಿತ್ತು. ಆ ದಿಸೆಯಲ್ಲಿ ಏನಾದರೂ ಕೆಲಸ ನಡೆದಿದೆಯೇ ?

ಶ್ರೀ ಬಿ. ಎಲ್. ಗೌಡ.—ಮಾನ್ಯ ಸದಸ್ಯರಿಗೆ ಏನೇನು ವಿವರ ಬೇಕು ಎಂದು ಸ್ಪಷ್ಟವಾಗಿ ಕೇಳಿದರೆ ಹೇಳುತ್ತೇನೆ. ಅದಕ್ಕೆ ಪ್ರತ್ಯೇಕವಾದ ಪ್ರಶ್ನೆ ಕೇಳಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ಈ ಪ್ರಶ್ನೆ ಇದಕ್ಕೆ ಸಂಬಂಧಪಟ್ಟಿಲ್ಲದೇ ಇರುವುದರಿಂದ ಅಧಿಕಾರಿಗಳು ಮಾನ್ಯ ಮಂತ್ರಿಗಳಿಗೆ ಮಾಹಿತಿ ಒದಗಿಸದೇ ಇರಬಹುದು. ಹೆಬ್ಬಾಳ್‌ನಲ್ಲಿರತಕ್ಕ ಕಾಲೇಜಿಗೆ ಇನ್‌ಟೇಕ್ 60 ಇತ್ತು. ತದನಂತರ 80 ಆಯಿತು. ಅದರ ನಂತರ 100 ಆಯಿತು. ಹೀಗಾಗಿ ಅಲ್ಲಿ ನಾಯಿ ಇಂಥದ್ದಕ್ಕೆಲ್ಲಾ ಶುಶ್ರೂಷೆ ಮಾಡುವುದಕ್ಕೆ ಸವಲತ್ತಿದೆಯೇ ವಿನಹ ಹೆಚ್ಚಿನ ಅವಕಾಶ ಇಲ್ಲ. ಆದ್ದರಿಂದ ಮಲ್ಲೇಶ್ವರ ಆಸ್ಪತ್ರೆಯನು ಹೆಬ್ಬಾಳ್‌ನಲ್ಲಿನ ಪಶುವೈದ್ಯ ಕಾಲೇಜಿಗೆ ವಹಿಸಿಕೊಡಬೇಕು ಎಂಬ ತೀರ್ಮಾನ ಹಿಂದೆ ಆಗಿತ್ತು. ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿದೆಯೇ ? ಗಮನಹರಿಸಿದೆಯೇ ?

ಶ್ರೀ ಬಿ. ಎಲ್. ಗೌಡ.—ಅದಕ್ಕೆ ನೋಟೀಸ್ ಬೇಕು ಸ್ವಾಮಿ.

ವಿಷಯ: ಬಾಗಲಕೋಟೆ ತಾಲ್ಲೂಕಿನ ಬೇವೂರು ಗ್ರಾಮದಲ್ಲಿ ಕೊಳಾಯಿ ಮೂಲಕ ಕುಡಿಯುವ ನೀರಿನ ಸರಬರಾಜು.

ಪ್ರ. 208 (44) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದ್‌ಗುಡ್ಡ).—ಮಾನ್ಯ ಗ್ರಾಮೀಣ ಅಭಿವೃದಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರೇ:—

(ಅ) ಬಾಗಲಕೋಟೆ ತಾಲ್ಲೂಕಿನ ಬೇವೂರ ಗ್ರಾಮದಲ್ಲಿ ನೀರು ಸರಬರಾಜು (ನಳದ ಯೋಜನೆ) ಮಾಡುವ ವಿಚಾರ ಸರಕಾರದವರ ಪರಿಶೀಲನೆಯಲ್ಲಿ ಇದೆಯೇ;

(ಆ) ಹಾಗಿದ್ದಲ್ಲಿ ಅದರ ವಿವರಗಳೇನು ;

(ಇ) ಇಲ್ಲದಿದ್ದಲ್ಲಿ ಕಾರಣವೇನು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು).—

(ಅ) ಬೇವೂರು ಗ್ರಾಮದಲ್ಲಿ ಈಗಾಗಲೇ ನಳದ ನೀರು ಸರಬರಾಜು ಯೋಜನೆಯು ಚಾಲ್ತಿಯಲ್ಲಿರುತ್ತದೆ.

(ಆ) ಬೇವೂರು ಗ್ರಾಮದ ನೀರು ಸರಬರಾಜು ಯೋಜನೆಯನ್ನು ಪೂರ್ತಿಗೊಳಿಸಿ ಸಂಬಂಧಪಟ್ಟ ಪಂಚಾಯತಿಗೆ 1967ರ ನವೆಂಬರ್ ಮಾಹೆಯಲ್ಲಿ ಹಸ್ತಾಂತರಿಸಲಾಗಿದೆ. ಅದರ ವಿಸ್ತರಣಾ ಕಾರ್ಯವನ್ನು ಸರ್ಕಾರದ ಆಜ್ಞೆ ಕ್ರಮಾಂಕ ಆರ್‌ಡಿಸಿ 98 ವಿಆರ್‌ಡಬ್ಲ್ಯೂ 80 ದಿನಾಂಕ 25-10-80ರಲ್ಲಿ ಮಂಜೂರು ಮಾಡಲಾಗಿದೆ. ಈ ಯೋಜನೆಯ ಅಂದಾಜು ಪಟ್ಟಿ ರೂ. 1,97,250-00ಗೆ ತಾಂತ್ರಿಕ ಮಂಜೂರಾತಿ ನೀಡಲಾಗಿದೆ. ಈ ಯೋಜನೆಯ ಕಾರ್ಯ ಪೂರ್ಣಗೊಳಿಸಲು ಕೆಲಸವನ್ನು ಟೆಂಡರುದಾರರಿಗೆ ನೀಡಲಾಗಿದ್ದು ರೈಸಿಂಗ್ ಮೈನ್ ಹಾಕುವ ಕೆಲಸ ಹಾಗೂ ಡಿಸ್ಟ್ರಿಬ್ಯೂಷನ್ ಕೆಲಸ ಮುಗಿದಿದೆ. ಜಲ ಸಂಗ್ರಹಾಲಯದ ಕೆಲಸವು ಪ್ರಗತಿಯಲ್ಲಿದೆ.

(ಇ) ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ಬೇವೂರು ಗ್ರಾಮದಲ್ಲಿ ಜನಸಂಖ್ಯೆ 1980-81ರ ಪ್ರಕಾರ 5 ಸಾವಿರ ಇದೆ. ಮಾನವ ಬದುಕಬೇಕಾದರೆ ನೀರಿನ ಅವಶ್ಯಕತೆ ಪ್ರಮುಖವಾದುದು ಎಂಬುದು ನೀರಿನ ಸಾಹೇಬರಾದ ಮಾನ್ಯ ನಜೀರ್ ಸಾಬ್ ಅವರಿಗೆ ಗೊತ್ತು. ಆದರೆ ಅಲ್ಲಿನ ಪ್ರಗತಿಯ ಬಗ್ಗೆ ಪಂಚಾಯಿತಿಯವರು ನೋಟೀಸ್ ಕೊಟ್ಟಿರುವುದನ್ನು ಓದುತ್ತೇನೆ.

ಅಧ್ಯಕ್ಷರು.—ಓದುವುದಕ್ಕಾಗುವುದಿಲ್ಲ. ಪ್ರಶ್ನೆ ಕೇಳಿ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ಪಂಚಾಯತಿಯವರು ಠರಾವು ಮಾಡಿದ್ದಾರೆ. ಅದನ್ನು ಓದುತ್ತೇನೆ.

ಅಧ್ಯಕ್ಷರು.—ಅದರಲ್ಲಿರತಕ್ಕ ಸಾರಾಂಶ ಹೇಳಿ. ನಂತರ ಉಪಪ್ರಶ್ನೆ ಕೇಳಿ. ಓದಬೇಡಿ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—15 ದಿವಸದಲ್ಲಿ ಟ್ಯಾಂಕನ್ನು ಮಾಡದೇಹೋದರೆ ಅಸಿಸ್ಟೆಂಟ್ ಕಮಿಷನರ್ ಆಫೀಸ್ ಮುಂದೆ ಉಪವಾಸ ಸತ್ಯಾಗ್ರಹ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಪ್ರಗತಿ ಎಂದರೆ ಇದೇನಾ ? ಮಾನ್ಯ ಮಂತ್ರಿಗಳು ಉತ್ತರದಲ್ಲಿ ಜಲಸಂಗ್ರಹಾಲಯದ ಕೆಲಸವು ಪ್ರಗತಿಯಲ್ಲಿದೆ ಎಂದು ಹೇಳಿದ್ದಾರೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಕೆಲಸ ನಿಧಾನವಾಗಿದೆ; ಒಪ್ಪಿಕೊಳ್ಳುತ್ತೇನೆ. 1980 ರಿಂದ ಕೆಲಸ ಮಂದಗತಿಯಿಂದ ನಡೆಯುತ್ತಿದೆ. ಒಂದು ಲಕ್ಷ ಗ್ಯಾಲನ್ನಿನ ಟ್ಯಾಂಕ್ ಅಲ್ಲಿ ಕಟ್ಟಬೇಕಾಗಿದೆ. ರೈಸಿಂಗ್ ಮೈನ್, ಡಿಸ್ಟ್ರಿಬ್ಯೂಶನ್ ಎಲ್ಲಾ ಮುಗಿದಿದೆ. ಟ್ಯಾಂಕ್ ಕಟ್ಟುವುದಕ್ಕೆ ಟೆಂಡರ್ ಕರೆಯಬೇಕು. ಮೂರು ಸಾರಿ ಕರೆದರೂ ಸರಿಯಾದ ಟೆಂಡರ್ ಬರಲಿಲ್ಲ. ಕಂಟ್ರಾಕ್ಟರ್ ಈಗ ಕೆಲಸ ಮಾಡುತ್ತಿಲ್ಲ. ಆದ್ದರಿಂದ ಆ ಕಂಟ್ರಾಕ್ಟರನ್ನು ವಜಾಮಾಡಿ ಇಲಾಖೆ ಮುಖಾಂತರ ಕೆಲಸ ಮಾಡುವುದಕ್ಕೆ ಆಜ್ಞೆ ಮಾಡಲಾಗಿದೆ. ಈಗಾಗಲೇ ಸ್ತಂಭಗಳು, ಅಡಿಪಾಯ ಹಾಕಲಾಗಿದೆ. ಅದು ಕ್ಯೂರ್ ಆಗುವುದಕ್ಕೇ 21 ದಿನಗಳು ಬೇಕು. ಅದಷ್ಟು ಜಾಗ್ರತೆ ಮುಗಿಸಿಕೊಡುತ್ತೇವೆ.

ಶ್ರೀ ಮಲ್ಲಾರಗೌಡ ಪಾಟೀಲ್.—ಅಲ್ಲಿಯವರೆಗೆ ಕೊಳವೆ ಬಾವಿಗಳನ್ನು ಹಾಕುವ ಪ್ರಯತ್ನ ಮಾಡುತ್ತೀರಾ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ನೀರಿಗೆ ಅಷ್ಟು ಅಗತ್ಯ ಇದ್ದರೆ ಮಾನ್ಯ ಸದಸ್ಯರು ಪತ್ರ ಬರೆದರೆ ಕೊಳವೆ ಬಾವಿಗಳನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಪ್ರ. 209 (30) ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).— ಶಿಕ್ಷಣಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :—

(ಅ) ರಾಜ್ಯದ ಬಹುತೇಕ ಪ್ರಾಥಮಿಕ ಪಾಠಶಾಲೆಗಳಲ್ಲಿ ಒಬ್ಬರೇ ಉಪಾಧ್ಯಾಯರು ಕೆಲಸ ಮಾಡುವುದರಿಂದ ಮಕ್ಕಳ ಪಾಠ ಇತ್ಯಾದಿ ಕಾರ್ಯಕ್ರಮಗಳು ಸಮರ್ಪಕವಾಗಿ ನಡೆಯದೆ ಮಕ್ಕಳ ಪ್ರಗತಿ ಕುಂಠಿತವಾಗುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ;

(ಆ) ಹಾಗಿದ್ದರೆ ಏಕೋಪಾಧ್ಯಾಯ ಪಾಠಶಾಲೆಗಳಿಗೆ ಈ ವರ್ಷದಿಂದಲೇ ಕನಿಷ್ಪಪಕ್ಷ ಇಬ್ಬರು ಉಪಾಧ್ಯಾಯರನ್ನು ನೇಮಿಸಲು ಸರಕಾರದವರು ಕ್ರಮ ಕೈಗೊಳ್ಳುವರೇ ?